# ಆಹಾ ಸುದ್ದಿ!

★ ಸಸಿತೋಟ

ಬ್ರಿಟನ್ ಶಾಲೆಯ ಗ್ರಂಥಾಲಯದಿಂದ 120 ವರ್ಷಗಳ ಹಿಂದೆ ವಿದ್ಯಾರ್ಥಿಯೊಬ್ಬ ತೆಗೆದುಕೊಂಡು ಹೋಗಿದ್ದ ಪುಸ್ತಕವನ್ನು ಆತನ ಮೊಮ್ಮಗಳು ಹಿಂದಿರುಗಿಸಿದ್ದಾಳಂತೆ. ಪ್ರೊ.ಅರ್ಥರ್ ಎಂಬಾತ ಒಯ್ದಿದ್ದ ಪುಸ್ತಕ ಸೂಕ್ಷ್ಮದರ್ಶಕದ ಮೇಲೆ ಇತ್ತಂತೆ. 12 ದಶಕಗಳ ನಂತರ ಪುಸ್ತಕಕ್ಕೆ ದಂಡ ಹಾಕಿದ್ದರೆ ಇನ್ನೊಂದು ಪುಸ್ತಕ ಬರೆಯುವಷ್ಟು ಸರಕು ಸಿಗುತ್ತಿತ್ತು.



ನೇಪಾಳದ ಈ ಮುತ್ತಜ್ಜಿ ಬಾಟುಲಿ ಎಂಬಾಕೆಗೆ ಈಗ ಬರೋಬ್ಬರಿ 112 ವರ್ಷ ವಯಸ್ಸಂತೆ. ಕಳೆದ 95 ವರ್ಷಗಳಿಂದ ನಿತ್ಯ 30 ಸಿಗರೇಟ್ ಬೂದಿ ಮಾಡುತ್ತಿದ್ದಾಳಂತೆ. ಆಕೆ ಬೇಗ ಬೂದಿಯಾಗೋದನ್ನು ತಡೆದಿದ್ದು ಈ ಬೂದಿ ಎಂದು ಸದ್ಯಕ್ಕೆ ಯಾರೂ ಅಧ್ಯಯನಕ್ಕೆ ಇಳಿದಿಲ್ಲವಂತೆ.




ಕ್ಯಾಲಿಫೋರ್ನಿಯಾದ ಈ 18ನೇ ರ್‍ಯಾಂಕಿಂಗ್ ತಿಂಡಿ ಪೋತ ಪ್ಯಾಬ್ಲೊ ಅನಕೊಂಡದ 3 ಅಡಿ ಉದ್ದದ ತಿನಿಸನ್ನು 13 ಚಿಲ್ಲರೆ ನಿಮಿಷದಲ್ಲಿ ತಿಂದು ಮುಗಿಸಿದನಂತೆ. ಅಂತರ್ಜಾಲದಲ್ಲಷ್ಟೇ ಜನಪ್ರಿಯವಾಗಿದ್ದ ಈ ತಿನಿಸನ್ನು ಮೊದಲ ಬಾರಿ ಪೂರ್ತಿ ತಿಂದು ಮುಗಿಸಿದ ಈತನಿಗೆ ಇನ್ನು ಮುಂದೆ ಅನಕೊಂಡ ತಿಂಡಿ ಉಚಿತವಂತೆ. ಈತನ ಸೌಭಾಗ್ಯ ಕಂಡು ಅನಕೊಂಡ ಬಿಟ್ಟರೆ ಬೇರೆ ಯಾರೂ ಹೊಟ್ಟೆಯುರಿ ಮಾಡಿಕೊಂಡಿರಲ್ಲ ಬಿಡಿ.



ನ್ಯೂಯಾರ್ಕ್‌ನ ರಿಯಾಲಿಟಿ ಟಿವಿ ಶೋ 'ಡಾನ್ಸ್ ಯುವರ್ ಆ್ಯಸ್ ಆಫ್' ಸ್ಪರ್ಧಿ. ತೂಕದ ವ್ಯಕ್ತಿಗಳು ಈ ಶೋದಲ್ಲಿ ಭಾಗವಹಿಸಿ ನರ್ತಿಸುತ್ತ ಶೋ ಮುಗಿಯುವ ವೇಳೆ ತೂಕ ಕಳೆದುಕೊಳ್ಳುತ್ತಾರಂತೆ.




ಪ್ರಧಾನಿ ಮೋದಿಯವರ 'ನಗದುರಹಿತ ವಹಿವಾಟು' ಮಂತ್ರಕ್ಕೆ ಮಧುರೈ ನಿವಾಸಿಯೊಬ್ಬ ಸ್ವರ ಸೇರಿಸಿದ್ದಾನಂತೆ. ಸಾರ್ವಜನಿಕ ಶೌಚಾಲಯ ಬಳಸಿದ್ದಕ್ಕಾಗಿ ಐದು ರೂಪಾಯಿ ಶುಲ್ಕಕ್ಕೆ ಚೆಕ್ ಬರೆದು ಅದರ ಚಿತ್ರವನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿಕೊಂಡಿದ್ದಾನೆ. ಚೆಕ್ ನಗದಾದ ನಂತರ ಸೇವೆ ನೀಡಲಾಗುವುದು ಎಂಬ ಸೂಚನಾ ಫಲಕ ತೂಗು ಹಾಕಿದ್ದರೇ ಎಂಬುದು ಗೊತ್ತಾಗಿಲ್ಲ.

ಪುರುಷರು ತಮ್ಮ ಸಾಮರ್ಥ್ಯ, ಶೌರ್ಯ ಪ್ರದರ್ಶಿಸಲು ಇತರರ ಎದುರು ಹೆಚ್ಚು ತಿನ್ನುತ್ತಾರಂತೆ. ಎಷ್ಟೆಂದರೆ ಸಾಮಾನ್ಯವಾಗಿ ತಿನ್ನುವುದಕ್ಕಿಂತ ನಾಲ್ಕು ಪಟ್ಟು ಹೆಚ್ಚು. ಹಾಗಂತ ನ್ಯೂಯಾರ್ಕ್ ವಿಶ್ವವಿದ್ಯಾನಿಲಯ ಅಧ್ಯಯನದ ವರದಿ ಪ್ರಕಟಿಸಿದೆಯಂತೆ. ಮನೆಯಲ್ಲಿ ಊಟ ಬಡಿಸುವಾಗ ಪತ್ನಿಯರು ತಮ್ಮ ತಮ್ಮ ಗಂಡನನ್ನು ಒಂಟಿಯಾಗಿ ಕೂರಿಸಲು ಮುಂದಾಗಬಹುದು.